Marikamba Government High School building at Sirsi

256. SMT. ANUSUYA GAJANANA SHARMA (Ankola).—Will the Minister for Education be pleased to state :—

(*a*) whether Government is aware that construction of the Marikamba Government High School building at Sirsi was started in 1960 or earlier ;

(*b*) whether it has come to the notice of the Government that the said building is not yet completed ;

(*c*) if so, the reasons for its non-completion ;

(*d*) since when the building work was taken over by the P.W.D. for construction ;

(*e*) the reasons why the building is left incompleted and allowed to remain in a bad condition ?

SRI B. SUBBAYYA SHETTY (Minister for Education).—

(*a*) The previous management i.e. the T.M.C., Sirsi entrusted the construction work to a Local contractor and the work commenced during 1961.

(*b*) Yes.

(*c*) There is a dispute pending in the court of law regarding the excess payment paid to the contractor. Consequently further construction work has been suspended.

(*d*) Government in their order dated 30th December 1969 authorised the Executive Engineer, Sirsi Division to take up the remaining construction work and to complete it as a deposit contribution work.

(*e*) Even though the Marikamba Municipal High School, Sirsi, was taken over to Government with effect from 1st April 1971, the actual possession of the incomplete school building was handed over to Education Department on 19th August 1976. Due to financial difficulties, the previous management *i.e.* T.M.C. Sirsi was not able to take up further construction work.

ಶ್ರೀಮತಿ ಅನಸೂಯ ಗಜಾನನಶರ್ಮ.—ನನ್ನ ಪ್ರಶ್ನೆಗೆ ಸರಿಯಾಗಿ ಮಾನ್ಯ ಸಚಿವರು ಉತ್ತರವನ್ನು ನೀಡಿಲ್ಲ. ಟಿ. ಎಂ. ಸಿ. ಯವರು ಕಾಮಗಾರಿಯನ್ನು ಕೈಗೊಳ್ಳುವುದಕ್ಕೆ ಅಸಮರ್ಥರಾಗಿದ್ದರು ಎಂದು ಹೇಳಿ ಅದನ್ನು ಸರ್ಕಾರಕ್ಕೆ ತನ್ನ ಪಕ್ಷಕ್ಕೆ ತೆಗೆದುಕೊಂಡ ಮೇಲೆ, ಮತ್ತೆ ಟಿ. ಎಂ. ಸಿ. ಯವರು ಕಟ್ಟಡ ಕಟ್ಟಲಿಲ್ಲ ಎಂದು ಉತ್ತರ ಕೊಡುವುದರಲ್ಲಿ ಏನು ಅರ್ಥವಿದೆ ?

ಅಧ್ಯಕ್ಷರು.—ಮಾನ್ಯ ಸಚಿವರ ಉತ್ತರ ಆಯ್ತಲ್ಲಿದೆ. ಅದನ್ನು ತಾವು ವಿಮರ್ಶಿಸಬೇಡಿ ; ಈಗ ಉಪಪ್ರಶ್ನೆಗಳನ್ನು ಕೇಳಬೇಕು.

ಶ್ರೀಮತಿ ಅನಸೂಯ ಗಜಾನನಶರ್ಮ.—ಅಚ್ಚು ಹಾಕಿಸಿರುವ ಉತ್ತರವೇ ಸರಿಯಿಲ್ಲ ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅದನ್ನು ಮಾನ್ಯ ಸದಸ್ಯರು ವಿಮರ್ಶಿಸುವುದು ಬೇಡ. ಉಪಪ್ರಶ್ನೆಗಳನ್ನು ಕೇಳಿ.

ಶ್ರೀಮತಿ ಅನಸೂಯ ಗಜಾನನಶರ್ಮ.—೧೯೯೦ನೇ ಆಗಸ್ಟ್ ೧೯೭೬ರಲ್ಲಿ ಶಾಲಾ ಕಟ್ಟಡದ ವಾಸ್ತವಿಕ ಒಡೆತನವನ್ನು ಶಿಕ್ಷಣ ಇಲಾಖೆ ಪಡೆದರೂ, ಇನ್ನೂ ಏತಕ್ಕೆ ಕಟ್ಟಡ ಕಾರ್ಯವನ್ನು ಮುಗಿಸಲಿಲ್ಲ ?

† ಶ್ರೀ ಬಿ. ಸುಬ್ಬಯ್ಯಶೆಟ್ಟಿ.—೧೯೬೧ರಲ್ಲಿ ಸಿರಸಿಯ ಒಬ್ಬ ಸ್ಥಳೀಯ ಕಂಟ್ರಾಕ್ಟರಿಗೆ ಈ ಶಾಲಾ ಕಟ್ಟಡ ಕಟ್ಟಲು ಕೊಟ್ಟರು. ನಂತರ, ಸ್ಥಳೀಯ ಕಂಟ್ರಾಕ್ಟರಿಗೂ ಟಿ. ಎಂ. ಸಿ. ಯವರಿಗೂ ಜಗಳ ಬಿದ್ದು, ಅದು ನ್ಯಾಯಾಲಯಕ್ಕೆ ಹೋಯಿತು. ನ್ಯಾಯಾಲಯಕ್ಕೆ ಹೋದ ನಂತರ ಕಟ್ಟಡದ ಕೆಲಸ ಮುಂದುವರಿಸಲಿಕ್ಕಾಗಲಿಲ್ಲ. ೩೦ನೇ ಡಿಸೆಂಬರ್ ೧೯೬೯ರಲ್ಲಿ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಂಡು ತೇವಣಾತಿ ವಂತಿಗೆ ಕಾವಣಗಾರಿಯನ್ನಾಗಿ ಅದನ್ನು ಪೂರ್ತಿಗೊಳಿಸುವಂತೆ ಸಿಸಿ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ಅಧಿಕಾರವನ್ನು ನೀಡುವ ಆಜ್ಞೆ ಹೊರಡಿಸಲಾಯಿತು. ಆದರೆ, ಟಿ. ಎಂ. ಸಿ. ಯವರು ಹಣ ಒದಗಿಸುವುದಕ್ಕಾಗುವುದಿಲ್ಲವೆಂದು ಹೇಳಿದುದರಿಂದ, ಆ ಕೆಲಸ ಅಲ್ಲಿಗೆ ನಿಂತುಬಿಟ್ಟಿತು. ೧೯೭೧ರಲ್ಲಿ ಟಿ. ಎಂ. ಸಿ. ಯವರು ಈ ಶಾಲೆಯನ್ನು ಸರ್ಕಾರಕ್ಕೆ ಒಪ್ಪಿಸಿಬಿಡಬೇಕೆಂದು ಒಂದು ನಿರ್ಣಯ ತೆಗೆದುಕೊಂಡರು. ಆದರೆ, ಅವರು ವಾಸ್ತವಿಕ ಒಡೆತನವನ್ನು ಕೊಡಲಿಲ್ಲ ; ಮತ್ತೆ ಅದಕ್ಕೆ ಬಾಡಿಗೆ ಕೊಡಿ ಎನ್ನುವ ವಾದವನ್ನು ಮುಂದಿಟ್ಟರು. ಕಡೆಗೆ ೧೯೭೬ರಲ್ಲಿ ಅದನ್ನು ಸರ್ಕಾರದ ವಶಕ್ಕೆ ಕೊಡಲಾಯಿತು. ಈಗ ಆ ಕಟ್ಟಡ ಕೆಲಸವನ್ನು ಸಂಪೂರ್ಣ ಮಾಡಬೇಕೆಂದು ಎಸ್ಟಿಮೇಟ್ ತಯಾರಿಸಿ, ಉದ್ಯುಕ್ತವಾಗಿದೆ.

ಶ್ರೀಮತಿ ಅನಸೂಯ ಗಜಾನನಶರ್ಮ.—ಉಡುಪಿಯಿಂದ ಇಂಜಿನಿಯರೊಬ್ಬರು ಬಂದು, ಈ ಕಟ್ಟಡವನ್ನು ಅಗೆದು ತೆಗೆದು ಹೊಸದಾಗಿ ನಿರ್ಮಾಣ ಮಾಡಬೇಕೆಂದು ಪರದಿ ಕೊಟ್ಟಿರುವುದಾಗಿ ನಾನು ಕೇಳಿದ್ದೇನೆ. ಆದುದರಿಂದ, ಈ ಕಟ್ಟಡಕ್ಕೆ ತಗಲುವ ಅಂದಾಜು ವೆಚ್ಚ ವೆಷ್ಟು ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಕಟ್ಟಡದ ಅಂದಾಜು ವೆಚ್ಚ ೬,೧೫,೦೦೦ ರೂಪಾಯಿಗಳು. ಕಟ್ಟಡವನ್ನು ಮುಗಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಅನಸೂಯ ಗಜಾನನಶರ್ಮ.—ಎಷ್ಟು ವರ್ಷಗಳಲ್ಲಿ ಮುಗಿಸಲಾಗುವುದು ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಆದಷ್ಟು ಬೇಗ ಮುಗಿಸಲಾಗುವುದು.

1-30 P.M.

Pay Scale for the Staff of the Primary Agricultural Service Co-operative Societies.

281. SR. L. T. THIMMAPPA HEGGADE (Sagar).—Will the Minister of State for Co-operation be pleased to state :—

(*a*) whether the pay scales have been prescribed for the officials of the Primary Agricultural Service Co-operative Societies in the State ;

(*b*) whether Government has realised the necessity to provide job securities to the officials of these extended service co-operative societies ; due to increase in their work load ;

(*c*) if so, in how many months the Government would take action to provide service security and prescribe the pay scales to these officials ?